ಜಿಲ್ಲಾಧಿಕಾರಿಗಳ ಕಾರ್ಯಾಲಯ, ಉತ್ತರ ಕನ್ನಡ, ಕಾರವಾರ – 581 301
OFFICE OF THE DEPUTY COMMISSIONER, UTTARA KANNADA DISTRICT, KARWAR, -581 301
ದೂರವಾಣಿ : (08382) 226406/226471/222071, ಫ್ಯಾಕ್ಸ್: 226603/222072 Email: dckarwar@gmail.com

ಸಂ. ಡಿಸಿಬಿ/ಎಂಎಜಿ/ಇತರೆ/ವಿವ-401/2019-20 23-03-2020

ವಿಷಯ: ಉತ್ತರ ಕನ್ನಡ ಜಿಲ್ಲೆಯಲ್ಲಿ ಕೋವಿಡ್-19 ಎಂಬ ಅಪಾಯಕಾರಿ ಸಾಂಕ್ರಾಮಿಕ ರೋಗ ಹರಡದಂತೆ ಸೂಕ್ತ ಮುಂಜಾಗೃತ ಕ್ರಮವಾಗಿ ವಿಧಿಸಿದ ನಿಷೇಧಾಜ್ಞೆದಲ್ಲಿ ಭಟ್ಕಳ ಉಪವಿಭಾಗಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಶರ್ತುಗಳನ್ನು ಸೇರಿಸುವ ಕುರಿತು.

ಜಿಲ್ಲಾ ದಂಡಾಧಿಕಾರಿ, ಉ.ಕ.
ಕರ್ನಾಟಕ ಸರ್ಕಾರ
District Magistrate, Uttara Kannada

ಉಲ್ಲೇಖ: 1. ಸಾಂಕ್ರಮಿಕ ರೋಗ ಕಾಯ್ದೆ 1897
2. ಕರ್ನಾಟಕ ಸರಕಾರದ ಅಧಿಸೂಚನೆ ಸಂಖ್ಯೆ ಹೆಚ್ ಎಫ್ ಡಬ್ಲ್ಯೂ / 54/ ಸಿಜಿಎಂ/2020 ದಿನಾಂಕ: 11-3-2020.
3. ಈ ಕಚೇರಿ ಸಮ ಕ್ರಮಾಂಕದ ಆದೇಶ ದಿನಾಂಕ: 21-03-2020.
4. ಸಿ.ಆರ್.ಪಿ.ಸಿ. ಸೆಕ್ಷನ್ 144 ರನ್ವಯ

*****

<u>ಪ್ರಸ್ತಾವನೆ :</u>

ದೇಶದಲ್ಲಿ ಮತ್ತು ರಾಜ್ಯದಲ್ಲಿ ಕೋವಿಡ್-19 ವೈರಾಣುಗಳಿಂದ ಸೋಂಕಿತರಾದವರ ಸಂಖ್ಯೆ ದಿನದಿಂದ ದಿನಕ್ಕೆ ವೃದ್ಧಿಸುತ್ತಿದೆ. ಸೋಂಕಿತರ ಒಡನಾಟದಲ್ಲಿರುವ ಎಲ್ಲರಿಗೂ ಈ ರೋಗದ ಲಕ್ಷಣಗಳು ಕಂಡುಬರುತ್ತಿರುವುದು ವೈದ್ಯಕೀಯವಾಗಿ ಸಾಬೀತಾಗಿರುತ್ತದೆ. ವಿದೇಶ ಪ್ರಯಾಣದಿಂದ ಹಿಂದಿರುಗಿದ ಕೆಲವರಲ್ಲಿ ಕೋವಿಡ್-19 ರೋಗದ ಲಕ್ಷಣಗಳು ಕಂಡುಬಂದಿದೆ. ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ಉಪವಿಭಾಗದ ಹೆಚ್ಚಿನ ನಾಗರೀಕರು ವಿದೇಶದಲ್ಲಿ ಸೇವೆ ಸಲ್ಲಿಸುತ್ತಿದ್ದು, ಈಗಷ್ಟೇ ಭಾರತಕ್ಕೆ ಹಿಂದಿರುಗಿರುತ್ತಾರೆ. ನಿಗಧಿತ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳಲು ಸೂಚನೆ ನೀಡಿದಾಗಿಯೂ ಸಹ ಸಾರ್ವಜನಿಕರು ಸಕಾರಾತ್ಮಕವಾಗಿ ಸ್ಪಂದಿಸದೇ ವಿದೇಶದಿಂದ ಹಿಂದಿರುಗಿದವರ ಸತತ ಒಡನಾಟದಲ್ಲಿರುವುದು ತಿಳಿದುಬಂದಿದೆ. ಹೀಗೆ ವಿದೇಶದಿಂದ ಹಿಂದಿರುಗಿದ ನಿವಾಸಿಗರನ್ನು ಆಡಳಿತವು ವೈದ್ಯಕೀಯ ತಪಾಸಣೆಗೆ ಒಳಪಡಿಸಿ ಅವರ ಮೇಲೆ ಸತತ ಕಣ್ಣಾವಲು ಇಟ್ಟಿದರೂ ಸಹ ಕೋವಿಡ್-19 ರೋಗಾಣುಗಳ ಹರಡುವಿಕೆಯ ಗತಿಯನ್ನು ಪರಿಗಣಿಸಿ ಭಟ್ಕಳ ಉಪವಿಭಾಗದಲ್ಲಿ ರೋಗದ ಹರಡುವಿಕೆಯನ್ನು ತಡೆಗಟ್ಟಲು ಇನ್ನಷ್ಟು ಬಿಗಿಯಾದ ಕ್ರಮಗಳನ್ನು ಕೈಗೊಳ್ಳುವುದು ಸೂಕ್ತವೆಂದು ಮನವರಿಕೆಯಾಗಿದೆ.

ಈಗಾಗಲೇ ಉತ್ತರ ಕನ್ನಡ ಜಿಲ್ಲೆಯಾದ್ಯಂತ ದಿನಾಂಕ 24-03-2020 ರ ಮುಂಜಾನೆ 6-00 ರಿಂದ ದಿನಾಂಕ 30-03-2020 ರ ಮಧ್ಯರಾತ್ರಿ 12-00 ಗಂಟೆಯವರೆಗೆ ಐದು ಮತ್ತು ಅದಕ್ಕಿಂತ ಹೆಚ್ಚಿನ ಜನರು ಗುಂಪು ಸೇರುವುದು, ಓಡಾಡುವುದು ಅಥವಾ ಇನ್ನಿತರೆ ಯಾವುದೆ ಚಟುವಟಿಕೆಗಳಲ್ಲಿ ಭಾಗವಹಿಸುವುದನ್ನು ತಡೆಗಟ್ಟಿ ಉಲ್ಲೇಖ (4) ರಂತೆ ನಿಷೇಧಾಜ್ಞೆ ಜಾರಿ ಮಾಡಿದ್ದು ಇರುತ್ತದೆ. ಈ ನಿಷೇಧಾಜ್ಞೆ ಮುಂದುವರೆಸುತ್ತಾ ಭಟ್ಕಳ ಉಪವಿಭಾಗಕ್ಕೆ ಸೀಮಿತಗಾಗಿ ಇನ್ನಷ್ಟು ಹೆಚ್ಚಿನ ಚಟುವಟಿಕೆಗಳನ್ನು ನಿಷೇಧಿಸುವುದು ಸೂಕ್ತವೆಂದು ಕಂಡುಬಂದಿದೆ.

ಈ ಹಿನ್ನಲೆಯಲ್ಲಿ ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ಉಪವಿಭಾಗದ ಇತ್ತೀಚಿನ ವಿದ್ಯಮಾನಗಳನ್ನು ಗಣನೆಗೆ ತೆಗೆದುಕೊಂಡು ದಂಡ ಪ್ರಕ್ರಿಯಾ ಸಂಹಿತೆ 1973 ರ ಕಲಂ 144 ರನ್ವಯ ಸಾರ್ವಜನಿಕ ಹಿತದೃಷ್ಟಿಯಿಂದ ಭಟ್ಕಳ ಉಪವಿಭಾಗಕ್ಕೆ ಸೀಮಿತವಾಗಿ ಈಗಾಗಲೇ ಉಲ್ಲೇಖ (4) ರನ್ವಯ ಹೊರಡಿಸಿದ ನಿಷೇಧಾಜ್ಞೆಗೆ ಇನ್ನಷ್ಟು ಶರ್ತುಗಳನ್ನು ವಿಧಿಸುವುದು ಸೂಕ್ತವೆಂದು ಮನಗಂಡು ಈ ಕೆಳಗಿನಂತೆ ಆದೇಶ ಹೊರಡಿಸಿದೆ.

## ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳಿಂದ ಮತ್ತು ದಂಡ ಪ್ರಕ್ರಿಯಾ ಸಂಹಿತೆ ಕಲಂ 144 ರಡಿ ನನ್ನಲ್ಲಿ ಪ್ರದತ್ತವಾದ ಅಧಿಕಾರದ ಮೇರೆಗೆ ಡಾ. ಹರೀಶ್ ಕುಮಾರ್ ಕೆ. ಭಾ.ಆ.ಸೇ. ಜಿಲ್ಲಾ ದಂಡಾಧಿಕಾರಿ ಉತ್ತರ ಕನ್ನಡ ಜಿಲ್ಲೆ ಆದ ನಾನು ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ಉಪವಿಭಾಗದಾದ್ಯಂತ ದಿನಾಂಕ: 24-03-2020 ರ ಮುಂಜಾನೆ 06-00 ಗಂಟೆಯಿಂದ 30-03-2020 ರ ಮಧ್ಯರಾತ್ರಿ 12-00 ಗಂಟೆಯವರೆಗೆ ಈ ಕೆಳಗಿನ ಚಟುವಟಿಕೆಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಚಟುವಟಿಕೆಗಳನ್ನು ನಿಷೇಧಿಸಿ ಆದೇಶಿಸುತ್ತೇನೆ.

1) ಜೀವನೋಪಾಯಕ್ಕೆ ಅಗತ್ಯವಿರುವ ಆಹಾರ, ಪಡಿತರ, ಹಾಲು, ತರಕಾರಿ, ದಿನಸಿ, ಮಾಂಸ, ಮೀನು, ಹಣ್ಣು, ಹಂಪಲ ಸರಬರಾಜು.
2) ಅತ್ಯಗತ್ಯ ಸರಕು ಸಾಗಾಣಿಕೆ,
3) ಜಾನುವಾರುಗಳಿಗೆ ಮೇವು ಸರಬರಾಜು,
4) ಆಹಾರ ಸಂಸ್ಕರಣೆ ಘಟಕಗಳು,
5) ಕುಡಿಯುವ ನೀರು ಸರಬರಾಜು,
6) ಹಾಲು ಉತ್ಪಾದನಾ ಘಟಕಗಳು.
7) ಗೋದಿ ಮತ್ತು ಅಕ್ಕಿ ಗೋದಾಮುಗಳಲ್ಲಿ ಸರಕು ಹೇರುವುದು ಮತ್ತು ಇಳಿಸುವುದು ಹಾಗೂ ರವಾನಿಸುವುದು.
8) ವಾಹನಗಳಿಗೆ ಇಂಧನ ಪೂರೈಕೆ.
9) ಅತ್ಯಗತ್ಯ ಸಾರ್ವಜನಿಕ ಸೇವೆಗಳಾದ ವಿದ್ಯುತಚ್ಛಕ್ತಿ, ನೀರು, ದೂರವಾಣಿ, ಬ್ಯಾಂಕ, ಔಷಧಿ, ವೈದ್ಯಕೀಯ, ಅಂಚೆ, ಪೌರ, ಅಗ್ನಿಶಾಮಕ, ವಿಮಾ ಮುಂತಾದ ಸೇವೆಗಳು ಮುಂದುವರೆಯುವುದು.
10) ಕೇಂದ್ರ ಮತ್ತು ರಾಜ್ಯ ಸರ್ಕಾರದ ಆಧೀನ ಮತ್ತು ಸೌಮ್ಯಕ್ಕೆ ಒಳಪಟ್ಟ ಎಲ್ಲಾ ಸಾರ್ವಜನಿಕ ಕಚೇರಿಗಳು.

ಈ ಆದೇಶವನ್ನು ಪೊಲೀಸ್ ಅಧೀಕ್ಷಕರು, ಉತ್ತರ ಕನ್ನಡ ಕಾರವಾರ ರವರು ಕಟ್ಟುನಿಟ್ಟಾಗಿ ಜ್ಯಾರಿಯಲ್ಲಿ ತರುವ ಬಗ್ಗೆ ಕ್ರಮ ಜರುಗಿಸತಕ್ಕದ್ದು ಹಾಗೂ ಆದೇಶದ ಅನುಷ್ಠಾನಕ್ಕೆ ಇತರೇ ಯಾವುದೇ ಇಲಾಖೆಯ ಅಧಿಕಾರಿ/ಸಿಬ್ಬಂದಿಗಳ ಸೇವೆ ಅಗತ್ಯವಿದ್ದಲ್ಲಿ ಅವರ ಸೇವೆಯನ್ನು ಪಡೆದುಕೊಳ್ಳಲು ಆರಕ್ಷಕ ಇಲಾಖೆಗೆ ಅನುಮತಿ ನೀಡಿದೆ.

ತಾಲೂಕಾ ದಂಡಾಧಿಕಾರಿ ಭಟ್ಕಳ ಮತ್ತು ಹೊನ್ನಾವರ ಹಾಗೂ ಉಪವಿಭಾಗದ ದಂಡಾಧಿಕಾರಿ ಭಟ್ಕಳರವರು ಈ ಆದೇಶವನ್ನು ತಮ್ಮ ಕಾರ್ಯವ್ಯಾಪ್ತಿಯಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಆರಕ್ಷಕ ಇಲಾಖೆಗೆ ಅಗತ್ಯ ಸಹಕಾರ ನೀಡಲು ಮತ್ತು ಯಾವುದೇ ರೀತಿಯಲ್ಲಿ ಆದೇಶದ ಉಲ್ಲಂಘನೆಯಾದಲ್ಲಿ ತಕ್ಷಣವೇ ಅಪಾಧಿತರ ವಿರುದ್ಧ ಕ್ರಮ ಜರುಗಿಸಲು ಬದ್ಧರಿರುತ್ತಾರೆ.

ಜಿಲ್ಲಾ ದಂಡಾಧಿಕಾರಿ ಉ.ಕ. District Magistrate, Uttara Kannada

ಜಿಲ್ಲಾ ದಂಡಾಧಿಕಾರಿ,
ಉತ್ತರ ಕನ್ನಡ, ಕಾರವಾರ.

ಪ್ರತಿ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ

1. ಪೋಲಿಸ್ ಅಧೀಕ್ಷಕರು, ಉತ್ತರ ಕನ್ನಡ, ಕಾರವಾರ
2. ಉಪ ವಿಭಾಗೀಯ ದಂಡಾಧಿಕಾರಿ ಭಟ್ಕಳ ಮತ್ತು ತಾಲೂಕಾ ಕಾರ್ಯನಿರ್ವಾಹಕ ದಂಡಾಧಿಕಾರಿ ಭಟ್ಕಳ
3. ಜಿಲ್ಲೆಯ ಎಲ್ಲಾ ಇಲಾಖಾ ಮುಖ್ಯಸ್ಥರಿಗೆ
4. ಸಹಾಯಕ ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕಾರವಾರ ರವರಿಗೆ

2/- ಈ ವಿಷಯವನ್ನು ಸರ್ಕಾರಕ್ಕೆ ವೆಚ್ಚ ಬಾರದ ರೀತಿಯಲ್ಲಿ ಸುದ್ದಿ ಮಾಧ್ಯಮಗಳಲ್ಲಿ ಪ್ರಕಟಿಸಲು ಸೂಚಿಸಿದೆ.

ಜಿಲ್ಲಾ ದಂಡಾಧಿಕಾರಿ,
ಉತ್ತರ ಕನ್ನಡ, ಕಾರವಾರ.